# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಂ.ಕವಿವಿ/ಸಿ.ಡಿ.ಸಿ(ಸಂಯೋಜನೆ)/2024-25/13 ದಿನಾಂಕ: 09-05-2024.

## ಅಧಿಸೂಚನೆ

ವಿಷಯ : 2024-25ನೇ ಶೈಕ್ಷಣಿಕ ವರ್ಷಕ್ಕಾಗಿ ಹೊಸ ಕಾಲೇಜು ಪ್ರಾರಂಭ ಹಾಗೂ ಸ್ನಾತಕ/ಸ್ನಾತಕೋತ್ತರ ಪದವಿ, ಈಗಾಗಲೇ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಯೋಜನೆ ಮುಂತಾದವುಗಳಿಗೆ UUCMS ತಂತ್ರಾಂಶದ ಮುಖಾಂತರ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ ಇಡಿ 166 ಯುಎನ್‌ಇ 2023, ಬೆಂಗಳೂರು ದಿನಾಂಕ: 08-05-2024.

2024-25 ನೇ ಶೈಕ್ಷಣಿಕ ಸಾಲಿಗಾಗಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಧಾರವಾಡ, ಗದಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿಯ ನೊಂದಾಯಿತ ಸಂಘ ಅಥವಾ ನೊಂದಾಯಿತ ಸಾರ್ವಜನಿಕ (ಟ್ರಸ್ಟ)ಗಳಿಂದ ಸ್ಥಾಪಿಸಲ್ಪಡುವ ಹೊಸ ಮಹಾವಿದ್ಯಾಲಯ ಹಾಗೂ ಸ್ನಾತಕ/ಸ್ನಾತಕೋತ್ತರ ಪದವಿ, ಪ್ರಸ್ತುತ ಅಸ್ಥಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಪದವಿಗಳ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಮುಂದುವರಿಕೆ/ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಳ/ಹೊಸ ವಿಷಯ ಪ್ರಾರಂಭ ಮುಂತಾದವುಗಳಿಗೆ ಕುರಿತಂತೆ ನಿಗದಿತ ಶುಲ್ಕದೊಂದಿಗೆ UUCMS ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸಲು ಈ ಕೆಳಗಿನ ವೇಳಾಪಟ್ಟಿಯನ್ನು ಅನುಸರಿಸುವುದು.

| ಅ.ನಂ. | ವಿಷಯ | ದಿನಾಂಕ |
|---|---|---|
| 1) | UUCMS ತಂತ್ರಾಂಶದ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ದಂಡ ರಹಿತ) | 09-05-2024 ರಿಂದ 20-05-2024 ರ ವರೆಗೆ |
| 2) | UUCMS ತಂತ್ರಾಂಶದ ಮುಖಾಂತರ ರೂ. 24,158/- ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 21-05-2024 ರಿಂದ 25-05-2024 ರ ವರೆಗೆ |
| 3) | UUCMS ತಂತ್ರಾಂಶದಲ್ಲಿ ನಮೂದಿಸಿದ ಎಲ್ಲ ಮಾಹಿತಿಯನ್ನು ಡೌನ್‌ಲೋಡ್ ಮಾಡಿ 3 ಪ್ರತಿಗಳನ್ನು ಸಂಯೋಜನಾ ವಿಭಾಗಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 27-05-2024 |
| 4) | ಸ್ಥಾನಿಕ ವಿಚಾರಣಾ ಸಮಿತಿಯು ತಮ್ಮ ಮಹಾವಿದ್ಯಾಲಯಕ್ಕೆ ಭೇಟಿ ನೀಡುವ ಅವಧಿ(ರಜಾ ದಿನ ಸಹಿತ) | 31-05-2024 ರಿಂದ 05-06-2024 ರ ವರೆಗೆ |
| 5) | ಹೊಸ ಮಹಾವಿದ್ಯಾಲಯ/ಹೊಸದಾಗಿ ವೃತ್ತಿಪರ ಪದವಿ/ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಲು ಇಚ್ಛಿಸುವವರು ಕಡ್ಡಾಯವಾಗಿ ಪ್ರಿ-ಕ್ವಾಲಿಫಿಕೇಶನ್ ಸಂಬಂಧ ನೇರವಾಗಿ ವಿಶ್ವವಿದ್ಯಾಲಯದ ಸಂಯೋಜನಾ ವಿಭಾಗದಿಂದ ಅರ್ಜಿ ಪಡೆದು ಸದರಿ ವಿಭಾಗಕ್ಕೆ ಅರ್ಜಿ ಸಲ್ಲಿಸುವ ಅವಧಿ | 11-05-2024 ರಿಂದ 18-05-2024 ರ ವರೆಗೆ |

**ವಿಶೇಷ ಸೂಚನೆ:**

1. **UUCMS ತಂತ್ರಾಂಶದ ಮುಖಾಂತರ ಸಂಯೋಜನೆ ಪ್ರಕ್ರಿಯೆಗೆ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಈಗಾಗಲೇ ಸಂಯೋಜನೆಗೊಂಡ ಮಹಾವಿದ್ಯಾಲಯಗಳು ತಮ್ಮ ಮಹಾವಿದ್ಯಾಲಯದಲ್ಲಿರುವ ಪದವಿಗಳ ಮಾಹಿತಿಯನ್ನು ತಮ್ಮ ಮಹಾವಿದ್ಯಾಲಯದ Admin Login ನಲ್ಲಿ Intake Sought ಅನ್ನು ವಿಶ್ವವಿದ್ಯಾಲಯಕ್ಕೆ ಸೂಕ್ತ ದಾಖಲೆಯೊಂದಿಗೆ UUCMS ನಲ್ಲಿ ಸಲ್ಲಿಸುವುದು. ವಿಶ್ವವಿದ್ಯಾಲಯ ದಾಖಲೆಗಳನ್ನು ಪರಿಶೀಲಿಸಿ ಅನುಮೋದನೆಗೊಂಡ ನಂತರ ಮಾತ್ರ ಸಂಯೋಜನೆಗೆ ಅರ್ಜಿ ಸಲ್ಲಿಸುವುದು. ಆದ್ದರಿಂದ, Intake Sought ಪ್ರಕ್ರಿಯೆಯನ್ನು ತತಕ್ಷಣ ಕೈಗೊಳ್ಳುವುದು.**
2. ಬಿ.ಎ. ಮತ್ತು ಬಿ.ಎಸ್ಸಿ. ಪದವಿಗಳಿಗೆ ಸರ್ಕಾರ ಅನುಮತಿಸಿದಂತೆ 2020-21ರ ಪೂರ್ವದಲ್ಲಿದ್ದಂತೆ 03 ವಿಷಯಗಳ ಸಂಯೋಜನೆಯ ಪ್ರವೇಶ ಮಿತಿಯನ್ನು UUCMS ತಂತ್ರಾಂಶದಲ್ಲಿ ಅಳವಡಿಸುವುದು.

ಸಂಯೋಜನೆಗೆ ಸಂಬಂಧಪಟ್ಟಂತೆ ಹಾಗೂ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಸಂಯೋಜನೆಗೆ ಸಂಬಂಧಪಟ್ಟ ಶುಲ್ಕ **Annexure-1, 2 & 3** ರಂತೆ UUCMS ತಂತ್ರಾಂಶದ ಮುಖಾಂತರ ಭರಿಸುವುದು.

**ಅ) ಪದವಿಗಳು**

ಅ) ಕಲಾ/ವಿಜ್ಞಾನ/ವಾಣಿಜ್ಯ/ಬಿ.ವ್ಹಿ.ಎ/ಬಿ.ಪಿ.ಎ.(ಮ್ಯೂಜಿಕ್)/ಬಿ.ಎಸ್.ಡಬ್ಲ್ಯೂ.

ಆ) ಬಿ.ಸಿ.ಎ/ಬಿಕಾಂ(ಸಿ.ಎಸ್)/ಬಿ.ಬಿ.ಎ/ಬಿ.ಟಿ.ಟಿ.ಎಮ್. (ಬ್ಯಾಚುಲರ್ ಆಫ್ ಟೂರಿಸಮ್ & ಟ್ರಾವೆಲ್ ಮ್ಯಾನೇಜಮೆಂಟ್)/ಬಿ.ಎ.(ಆಯ್.ಎಲ್.ಆರ್.ಡಿ.)

ಇ) ಬಿ.ಎ.ಎಸ್.ಎಲ್.ಪಿ (ಬ್ಯಾಚ್ಯುಲರ್ ಆಫ್ ಆಡೀಯಾಲಜಿ ಮತ್ತು ಸ್ಪೀಚ್ ಲ್ಯಾಂಗ್‌ವೇಜ ಪೆಥಾಲಜಿ) ಪದವಿಗೆ Rehabilitation Council of India (RCI) ದಿಂದ ಮಾನ್ಯತೆ ಪಡೆದಿರಬೇಕು.

ಈ) ಹೊಸ ಬಿ.ಎಡ್ ಮತ್ತು ಹೊಸ ಬಿ.ಪಿ.ಎಡ್ ಪದವಿಗಳಗೆ ಅರ್ಜಿ ಸಲ್ಲಿಸುವವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ೨೦೦೦ ದ ಪ್ರಕರಣ ೫೯(೧೩) ರ ಪ್ರಕಾರ NCTE ಯಿಂದ ಮಾನ್ಯತೆ ಪಡೆಯುವುದು ಕಡ್ಡಾಯ. ಆದರೆ, RCI ಪತ್ರದ ಪ್ರಕಾರ ಹೊಸದಾಗಿ ಪ್ರಾರಂಭಿಸುವ ೦೨ ವರ್ಷದ ಬಿ.ಎಡ್. ಪದವಿಗಳನ್ನು ಸ್ಥಗಿತಗೊಳಸಲಾಗಿದೆ.

**ಆ) ಹೊಸ ಸ್ನಾತಕೋತ್ತರ ಪದವಿಗಳು ಹಾಗೂ ಈಗಾಗಲೇ ಪ್ರಾರಂಭಿಸಿದ ಸ್ನಾತಕೋತ್ತರ ಪದವಿಗಳ ಮುಂದುವರಿಕೆ/ವಾರ್ಷಿಕ ನವೀಕರಣ:**

I. ಎಂ.ಎಸ್ಸಿ / ಎಂ.ಎ / ಎಂ.ಕಾಂ / ಎಂ.ಸಿ.ಎ / ಎಂ.ಬಿ.ಎ / ಎಂ.ವ್ಹಿ.ಎ (ಮಾಸ್ಟರ ಆಫ್ ವಿಜುವಲ್ ಆರ್ಟ್ಸ) ಹಾಗೂ ಅಪ್ಲೈಡ ಆರ್ಟ/ ಪಿ.ಜಿ.ಡಿ.ಸಿ.ಎ/ ಈ ಕಾಮರ್ಸ / ಎಂ.ಎಡ್ / ಎಂ.ಪಿ.ಎಡ್ / ಎಂ.ಎಸ್ಸಿ (ಕಂಪ್ಯೂಟರ ಸೈನ್ಸ) / ಎಂ.ಎಸ್.ಡಬ್ಲ್ಯೂ/ಎಂ.ಮ್ಯೂಜಿಕ್/ಮಾಸ್ಟರ್ ಆಫ್ ಸೋಶಿಯಲ್ ಎಂಟರ್‌ಪ್ರಿನಿಯರಶಿಪ್ (ಎಂ.ಎಸ್.ಇ)/ಎರಡು ವರ್ಷಗಳ ಮಾಸ್ಟರ ಆಫ್ ಫೈನಾನ್ಸಿಯಲ್ ಮ್ಯಾನೇಜಮೆಂಟ ಸೆಮಿಸ್ಟರ್ ಪದವಿ ಸಿ.ಬಿ.ಸಿ.ಎಸ್ ಅಡಿಯಲ್ಲಿ/ ಒಂದು ವರ್ಷದ ಮಾಸ್ ಕಮ್ಯುನಿಕೇಶನ್ & ಜರ್ನಅಸಂ (ಪಿ.ಜಿ.ಡಿ.ಎಂ.ಸಿ.ಜೆ) ಸ್ನಾತಕೋತ್ತರ ಪದವಿ (ಎರಡು ಸೆಮಿಸ್ಟರ್)/ ಪಿ.ಜಿ ಡಿಪ್ಲೊಮಾ ಇನ್ ಬಯೋ-ಸ್ಟ್ಯಾಟಿಸ್ಟಿಕ/ಪಿ.ಜಿ ಡಿಪ್ಲೋಮಾ ಇನ್ ಬ್ಯಾಂಕ ಮ್ಯಾನೇಜಮೆಂಟ (PGDBM) (ಎಂ.ಬಿ.ಎ ಹೊಂದಿರುವ ಮಹಾವಿದ್ಯಾಲಯಗಳಗೆ ಮಾತ್ರ ಅನ್ವಯಿಸುತ್ತದೆ.) (ಈ ಮೇಲೆ ನಮೂದಿಸಿದ ಪಿ.ಜಿ ಡಿಪ್ಲೋಮಾ ಕೋರ್ಸಗಳನ್ನು ಸ್ನಾತಕೋತ್ತರ ಪದವಿಗಳದ್ದ ಮಹಾವಿದ್ಯಾಲಯಗಳಲ್ಲಿ ಮಾತ್ರ ಪ್ರಾರಂಭಿಸಲು ಅವಕಾಶವಿರುತ್ತದೆ.)

**ಹೊಸ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳಗೆ ಸೂಚನೆ:**

i) ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳು ಕರ್ನಾಟಕ ವಿಶ್ವವಿದ್ಯಾಲಯದಿಂದ ಶಾಶ್ವತ ಸಂಯೋಜನೆ ಹೊಂದಿರಬೇಕು ಅಥವಾ ೨ ವರ್ಷಗಳವರೆಗೆ ಸತತವಾಗಿ ಮುಂದುವರಿಕೆ ಸಂಯೋಜನೆ ಹೊಂದಿರಬೇಕು. ಅಲ್ಲದೇ ಪದವಿ ಮಹಾವಿದ್ಯಾಲಯದಲ್ಲಿಯೇ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಬೇಕು.

ii) ಎಂ.ಬಿ.ಎ/ಎಂ.ಸಿ.ಎ ಪ್ರಾರಂಭಿಸುವವರು AICTE ಯಿಂದ, ಎಂ.ಎಡ್/ಎಂಪಿ.ಎಡ್. ಇವರು NCTE ಯಿಂದ ಮತ್ತು ಎಂ.ಎ.ಎಸ್.ಎಲ್.ಪಿ ಪ್ರಾರಂಭಿಸುವವರು RCI ಯಿಂದ ಮಾನ್ಯತೆ ಪಡೆದಿರಬೇಕು. ಈ ಪದವಿಗಳಗೆ ಮೇಲ್ಕಾಣಿಸಿದ ನಂ.(i)ರಲ್ಲಿ ತಿಳಸಿರುವ ಷರತ್ತು ಅನ್ವಯಿಸುವದಿಲ್ಲ.

**ಹೊಸ ಮಹಾವಿದ್ಯಾಲಯ, ಹೊಸದಾಗಿ ಪದವಿ ಮತ್ತು ಹೊಸದಾಗಿ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸುವ ಸಂಸ್ಥೆಗಳು ಈ ಕೆಳಗಿನ ಜಮೀನು ಹೊಂದಿರುವ ಅವಶ್ಯವಾಗಿದೆ:**

ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆ ದಿನಾಂಕ: ೧೮/೦೨/೨೦೨೨ ರನ್ವಯ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಹೊಸ ಕಾಲೇಜುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳು ಹಾಗೂ ಹೊಸ ಮಹಾವಿದ್ಯಾಲಯ ಸ್ಥಾಪಿಸಲು ತಮ್ಮ ಜಮೀನಿನ ಕುರಿತು ಕೆಳಗಿನಂತೆ ಮಾನದಂಡಗಳನ್ನು ಅನುಸರಿಸಲು ಸೂಚಿಸಿದೆ.

**a) Not less than 0.5 acres if it is located in the mega cities.**

**b) 1 acre it is located in BMRDA, City Corporation and district head quarters.**

**c) 1.5 acres if it is located in Munciplilties or taluk head quarters.**

**d) 3 acres if it is any other rural areas.**

ಮಹಾವಿದ್ಯಾಲಯಕ್ಕೆ ಸಂಬಂಧಿಸಿದಂತೆ ಮೇಲ್ಕಾಣಿಸಿದ ಜಮೀನಿನ ಕುರಿತು ಪಹಣಿ ಅಥವಾ ಮುನ್ಸಿಪಾಲಟಿ/ಕಾರ್ಪೋರೇಶನಗಳಂದ ಪಡೆದ ಇತ್ತೀಚಿನ ಖಾತಾ ನಕಲು ಅಥವಾ ಸದರ ಜಮೀನಿನನ್ನು ಸಂಸ್ಥೆಯ/ ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ನೊಂದಾಯಿತ ಆಗಿರುವ ಕ್ರಯ ಪತ್ರ ಅಥವಾ ೩೦ ವರ್ಷಗಳಂದ ಕಡಿಮೆ ಇಲ್ಲದ ಅವಧಿಯ ಲೀಜ್ ಡೀಡ್ ಅಥವಾ ದಾನಪತ್ರದ ನಕಲು ಪ್ರತಿಗಳನ್ನು ಹಾಜರಪಡಿಸುವುದು.

ಹೊಸ ಮಹಾವಿದ್ಯಾಲಯ ಹಾಗೂ ಸ್ನಾತಕ/ಸ್ನಾತಕೋತ್ತರ ಪದವಿ, ಪ್ರಸ್ತುತ ಅಸ್ಥಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಪದವಿಗಳ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಮುಂದುವರಿಕೆ/ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಳ/ಹೊಸ ವಿಷಯ ಪ್ರಾರಂಭ ಕುರಿತು ಈ ಕೆಳಗಿನ ಪದವಿಗಳಗೆ UUCMS ತಂತ್ರಾಂಶದ ಮುಖಾಂತರ ನಿಗದಿತ ನಮೂನೆಯಲ್ಲಿ ಸಂಯೋಜನೆ ಶುಲ್ಕದೊಂದಿಗೆ ಅರ್ಜಿಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ಸೂಚಿಸಲಾಗಿದೆ.

**ಹೊಸ ಸಂಯೋಜನಾ ಶುಲ್ಕ : ಪ್ರತಿ ಪದವಿಗೆ ಪ್ರಿ-ಕ್ವಾಲಿಫಿಕೇಶನ್ ಅರ್ಜಿ ನಮೂನೆ ಶುಲ್ಕ - ರೂ. 4,026/-**

| ಅ.ನಂ. | ಪದವಿಗಳ ವಿವರಗಳು | ಹೊಸ ಸಂಯೋಜನೆಗಾಗಿ ಪ್ರಿ-ಕ್ವಾಲಿಫಿಕೇಶನ್ ತನಿಖಾ ಶುಲ್ಕ |
|---|---|---|
| 1 | ಬಿ.ಬಿ.ಎ/ಬಿ.ಕಾಂ(ಸಿ.ಎಸ್)/ ಬಿ.ಎಸ್.ಡಬ್ಲ್ಯೂ/ಬಿ.ಟಿ.ಟಿ.ಎಂ/ ಬಿ.ಸಿ.ಎ,/ಬಿ.ಎ.ಎಸ್.ಎಲ್.ಪಿ/ಬಿ.ಎಸ್ಸಿ. (ಪಲ್ಪ & ಪೇಪರ್) ಬಿ.ಎಡ್/ಬಿ.ಪಿ.ಎಡ್ | ರೂ. 40,262/- |
| 2 | i. P. G Diploma in Yoga studies<br>ii. ಎರಡು ವರ್ಷದ ಮಾಸ್ಟರ ಆಫ್ ಫೈನಾನ್ಸಿಯಲ್ ಮ್ಯಾನೇಜಮೆಂಟ ಸೆಮಿಸ್ಟರ್ ಪದವಿಯ ಸಿ.ಬಿ.ಸಿ.ಎಸ್ ಅಡಿಯಲ್ಲಿ<br>iii. ಒಂದು ವರ್ಷದ ಮಾಸ್ ಕಮ್ಯುನಿಕೇಶನ್ & ಜರ್ನಲಿಸಂ (ಪಿ.ಜಿ.ಡಿ.ಎಂ.ಸಿ.ಜೆ) ಸ್ನಾತಕೋತ್ತರ ಪದವಿ (ಎರಡು ಸೆಮಿಸ್ಟರ್)<br>iv. ಪಿ.ಜಿ ಡಿಪ್ಲೊಮಾ ಇನ್ ಬಯೋ-ಸ್ಟ್ಯಾಟಿಸ್ಟಿಕ್ಸ | ರೂ. 55,636/- |
| 3 | ಎಂ.ಎ/ಎಂ.ಎಸ್ಸಿ (ಈಗಾಗಲೇ ಸ್ಥಾಪಿತ ಪದವಿ ಮಹಾವಿದ್ಯಾಲಯಗಳಲ್ಲಿ) | ರೂ. 64,420/- |
| 4 | ಎಂ.ಸಿ.ಎ/ಪಿಜಿಡಿಸಿಎ/ ಎಂ.ಪಿ.ಎಡ್/ ಎಂ.ಎಸ್.ಡಬ್ಲ್ಯೂ/ಎಂ.ಟಿ.ಟಿ.ಎಂ./ ಎಂ.ವ್ಹಿ.ಎ./ಎಂ.ಮ್ಯೂಜಿಕ್ | ರೂ. 60,899/- |
| 5 | ಎಂ. ಕಾಂ./ಎಂ.ಆಯ್.ಎಂ./ಇ-ಕಾಮರ್ಸ/ ಎಂ.ಬಿ.ಎ/ಎಂ.ಎಸ್.ಇ/ ಪಿ.ಜಿ.ಡಿ.ಬಿ.ಎಂ/ಎಂ.ಎಡ್ | ರೂ. 80,526/- |

I. ಪ್ರಿ-ಕ್ವಾಲಿಫಿಕೇಶನ್ ಅರ್ಜಿ ಮತ್ತು ಸಂಬಂಧಪಟ್ಟ ಪದವಿಗಳ ಸಂಯೋಜನಾ ಶುಲ್ಕದ ಮೊತ್ತವನ್ನು SBI Collect ಮುಖಾಂತರ ಮಾತ್ರ ಭರಿಸುವುದು (**ಡಿ.ಡಿ. ಸ್ವೀಕರಿಸಲಾಗುವುದಿಲ್ಲ**).

II. ಸ್ನಾತಕೋತ್ತರ ಹಾಗೂ ಬಿಬಿಎ/ಬಿ.ಸಿ.ಎ/ಬಿ.ಕಾಂ(ಸಿ.ಎಸ್)/ಬಿ.ಎಸ್.ಸಿ(ಸಿಎಸ್)/ಬಿ.ಎ.ಎಸ್.ಎಲ್.ಪಿ/ ಬಿ.ಎಸ್.ಡಬ್ಲ್ಯೂ/ಬಿ.ಎ.ಎಸ್ಸಿ ಪದವಿಗಳನ್ನು ಪ್ರಾರಂಭಿಸುವವರು ಮಾತ್ರ ಪ್ರಿ-ಕ್ವಾಲಿಫಿಕೇಶನ್ ಅರ್ಜಿ ಸಲ್ಲಿಸಬೇಕಾಗುವದು. ಈ ಅರ್ಜಿಗಳ ಬಗ್ಗೆ ಸ್ಥಾನಿಕ ತನಿಖಾ ಸಮಿತಿಯು ಸದರ ಪದವಿ ಪ್ರಾರಂಭಿಸಲು ಶಿಫಾರಸ್ಸು ಮಾಡಿದರೆ ನಿಯಮಿತ (ರೆಗ್ಯೂಲರ) ಸಂಯೋಜನೆ ಅರ್ಜಿ ಸಲ್ಲಿಸಬೇಕಾಗುವುದು.

III. 2023-24ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ, ಶಾಶ್ವತ ಸಂಯೋಜನೆಗೆ ಅನುಮೋದನೆಗೊಳ್ಳದಿದ್ದಲ್ಲಿ ಅಂತಹ ಮಹಾವಿದ್ಯಾಲಯಗಳು ಪುನಃ 2024-25 ನೇ ಸಾಲಿಗೆ ಮುಂದುವರಿಕೆ ಸಂಯೋಜನಾ ಅರ್ಜಿ ಸಲ್ಲಿಸಬೇಕಾಗುವುದು. ಪರಿಶಿಷ್ಟ ಜಾತಿ ವ ಪಂಗಡದ ಸಂಸ್ಥೆಯವರಿಗೆ ಸಂಯೋಜನೆ ಶುಲ್ಕಗಳಲ್ಲಿ ಮಾತ್ರ ಪ್ರತಿಶತ 50% ರಷ್ಟು ರಿಯಾಯಿತಿ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಸಿ.ಡಿ.ಸಿ/ಸಂಯೋಜನೆ ವಿಭಾಗದಿಂದ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ (0836) 2215215ಕ್ಕೆ ಸಂಪರ್ಕಿಸಬಹುದು.

IV. ಸಂಯೋಜನಾ ಶುಲ್ಕಗಳ ಬಗ್ಗೆ ವೆಬ್‌ಸೈಟ್ **www.kud.ac.in** ಮೂಲಕ ಮಾಹಿತಿ ಪಡೆದುಕೊಳ್ಳಬಹುದು. ವೆಬ್‌ಸೈಟನಲ್ಲಿ ನೀಡಿದ ಅಧಿಸೂಚನೆಯ ಎಲ್ಲ ಮಾಹಿತಿಯು/ಶುಲ್ಕಗಳು ಶರತ್ತು/ ತಿದ್ದುಪಡಿಗೊಳಪಟ್ಟಿರುತ್ತದೆ ಹಾಗೂ ಸರ್ಕಾರದ ಆದೇಶ ದಿನಾಂಕ: 05/04/2023 ರ ಪ್ರಕಾರ ಉನ್ನತ ಶಿಕ್ಷಣ ಇಲಾಖೆಯು ಅಭಿವೃದ್ಧಿ ಪಡಿಸಿರುವ UUCMS ತಂತ್ರಾಂಶದ ಮುಖಾಂತರ ಆನ್‌ಲೈನ್ ಸಂಯೋಜನಾ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

**ವಿಶೇಷ ಸೂಚನೆ:**

1. ಮಹಾವಿದ್ಯಾಲಯಗಳು UUCMS ತಂತ್ರಾಂಶದ ಮುಖಾಂತರ ಶುಲ್ಕ ಭರಿಸುವುದರೊಂದಿಗೆ ಅರ್ಜಿ ಸಲ್ಲಿಸಿದ ನಂತರ ಡೌನ್‌ಲೋಡ್ ಮಾಡಿ 03 ಪ್ರತಿಗಳೊಂದಿಗೆ **Annexure-3** ಕ್ರಮ ಸಂಖ್ಯೆ 11ರಲ್ಲಿ ಕಾಣಿಸಿದ ವಾರ್ಷಿಕ ಶುಲ್ಕವನ್ನು ಮಾತ್ರ SBI Collect ಮುಖಾಂತರ ಭರಿಸಿ, ಅರ್ಜಿಯನ್ನು ಸಂಯೋಜನಾ ವಿಭಾಗಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ಇನ್ನುಳಿದ ಶುಲ್ಕವನ್ನು UUCMS ತಂತ್ರಾಂಶದ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು.
2. UUCMS ತಂತ್ರಾಂಶದಲ್ಲಿ ಸಲ್ಲಿಸಿದ ಅರ್ಜಿಯ ಜೊತೆಗೆ ವಿಷಯವಾರು ತಮ್ಮ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಮಾಹಿತಿಯನ್ನು ಅನುಬಂಧ 05ರಲ್ಲಿ ಸಂಬಂಧಿಸಿದಂತೆ ಕಡ್ಡಾಯವಾಗಿ ಸಲ್ಲಿಸುವುದು.

A. Channappa

**ಕುಲಸಚಿವರು**

ಗೆ,

1) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿದ ಎಲ್ಲ ಮಹಾವಿದ್ಯಾಲಯಗಳ ಮಾಹಿತಿಗಾಗಿ
2) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕ.ವಿ.ವಿ ಧಾರವಾಡ ಇವರ ಮಾಹಿತಿಗಾಗಿ ಹಾಗೂ ವಿವರವಾದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟನಲ್ಲಿ ಪ್ರಕಟಪಡಿಸಲು ತಿಳಿಸಲಾಗಿದೆ.

KARNATAK UNIVERSITY DHARWAD

Annexure-1

**AFFILIATION : ALL UG PROGRAMMES**
**Stage : Set Affiliation Fees**

| Sl. No. | Item | B.A/B.Sc./BVA/BPA (Music)/BA ILRD/(Rs.) | B.Com. (Rs.) | BBA/ BSW(Rs.) | BCA/B.Sc. (Pulp & Paper)/ BASLP(Rs.) | B.Ed. (Rs.) | B.P.Ed. (Rs.) | Certificate Course in Yoga(Rs.) |
|---|---|---|---|---|---|---|---|---|
| 1 | Renewal of temporary affiliation (RTA)/Continuation (ಸಂಯೋಜನೆ ಮುಂದುವರಿಕೆ ಕಡ್ಡಾಯ ಪ್ರತಿ ವರ್ಷ) | Rs. 16,105/- per section | 19,326/- per section | 16,105/- per section | 16,105/- per section | 64,420/- per section | 25,769/- per section | 12,079/- |
| 2 | New College (NC) (ಹೊಸ ಮಹಾವಿದ್ಯಾಲಯ) | ಪ್ರತಿ ಪದವಿಗೆ 26,573/- | 72,474/- | ಪ್ರತಿ ಪದವಿಗೆ 69,252/- | ಪ್ರತಿ ಪದವಿಗೆ 80,525/- | 1,28,841/- | 1,28,841/- | 24,158/- |
| 3 | Extension of permanent affiliation (EPA) (ಶಾಶ್ವತ ಸಂಯೋಜನೆ ವಿಸ್ತರಣೆ – ಪ್ರತಿ 05 ವರ್ಷ) | ಪ್ರತಿ ಪದವಿಗೆ 22,547/- | 32,210/- | ಪ್ರತಿ ಪದವಿಗೆ 20,132/- | ಪ್ರತಿ ಪದವಿಗೆ 20,132/- | 99,851/- | 32,210/- | -- |
| 4 | Fresh permanent affiliation (FPA) (ಹೊಸ ಶಾಶ್ವತ ಸಂಯೋಜನೆ) | ಪ್ರತಿ ಪದವಿಗೆ 48,315/- | 64,420/- | ಪ್ರತಿ ಪದವಿಗೆ 1,48,167/- | ಪ್ರತಿ ಪದವಿಗೆ 1,48167/- | 80,526/- | 80,526/- | -- |
| 5 | Renewal of permanent of affiliation (RPA) (ಶಾಶ್ವತ ಸಂಯೋಜನೆ ನವೀಕರಣ ಪ್ರತಿ 05 ವರ್ಷಕ್ಕೆ) | ಪ್ರತಿ ಪದವಿಗೆ 22,547/- | 32,210/- | ಪ್ರತಿ ಪದವಿಗೆ 20,132/- | ಪ್ರತಿ ಪದವಿಗೆ 20,132/- | 99,851/- | 32,210/- | -- |
| 6 | Intake Sought (IS) (ಪ್ರವೇಶ ಮಿತಿಯ ಬೇಡಿಕೆ ಹೊಸ ಸಂಯೋಜನೆಗೆ ಮಾತ್ರ) | ಪ್ರತಿ ಪದವಿಗೆ 26,573/- | 72,474/- | ಪ್ರತಿ ಪದವಿಗೆ 69,252/- | ಪ್ರತಿ ಪದವಿಗೆ 80,525/- | 1,28,841/- | 1,28,841/- | 24,158/- |
| 7 | Increase in Intake (II) (ಪ್ರವೇಶ ಮಿತಿಯ ಹೆಚ್ಚಳ ಚಾಲ್ತಿಯಲ್ಲಿರುವ ಪದವಿಗೆ ಮಾತ್ರ) | ಪ್ರತಿ ವಿದ್ಯಾರ್ಥಿಗೆ ರೂ.3,000/- | ಪ್ರತಿ ವಿದ್ಯಾರ್ಥಿಗೆ ರೂ.4,500/- | ಪ್ರತಿ ವಿದ್ಯಾರ್ಥಿಗೆ ರೂ.5,000/- | ಪ್ರತಿ ವಿದ್ಯಾರ್ಥಿಗೆ ರೂ.5,000/- | ಅನ್ವಯಿಸುವುದಿಲ್ಲ (ರೂ.1,00,000) | ಅನ್ವಯಿಸುವುದಿಲ್ಲ (ರೂ.1,00,000) | ಅನ್ವಯಿಸುವುದಿಲ್ಲ (ರೂ.1,00,000) |
| 8 | Extension of temporary affiliation (ETA)(ತಾತ್ಕಾಲಿಕ ಸಂಯೋಜನೆ ವಿಸ್ತರಣೆ ಹೊಸ ಪದವಿ ಪ್ರಾರಂಭದಿಂದ ಮುಂದಿನ 2 ವರ್ಷಗಳಿಗೆ ಮಾತ್ರ) | ಪ್ರತಿ ಪದವಿಗೆ 19,323/- | 19,326/- | ಪ್ರತಿ ಪದವಿಗೆ 16,105/- | ಪ್ರತಿ ಪದವಿಗೆ 16,105/- | 64,420/- | 25,769/- | 12,079/- |

Director

Registrar

Annexure-2

# KARNATAK UNIVERSITY DHARWAD
## AFFILIATION : ALL PG PROGRAMMES
### Stage : Set Affiliation Fees

| Sl. No. | Item | All M.A. (Rs.) | M.Com./ MIM e-Commerce (Rs.) | All M.Sc (Rs.) | PGDCA (Rs.) | MCA/MBA/ MSE/ PGDBM (Rs.) | M.Ed. (Rs.) | M.P.Ed. (Rs.) | MSW/ MTTM/ MVA/ M.Music (Rs.) | PGD Yoga and other PGD (Rs.) |
|---|---|---|---|---|---|---|---|---|---|---|
| 1 | Renewal of temporary affiliation (RTA)/ Continuation (ಸಂಯೋಜನೆ ಮುಂದುವರಿಕೆ ಕಡ್ಡಾಯ-ಪ್ರತಿ ವರ್ಷ) | 24,158/- | 80,526 | 32,210 | 20,132 | 80,526 | 80,526 | 19,486 | 20,131 | 20,131 |
| 2 | New College (NC) (ಹೊಸ ಮಹಾವಿದ್ಯಾಲಯ) | 1,28,841/- | 1,61,051 | 96,631 | 80,526 | 1,61,051 | 1,61,051 | 80,526 | 80,526 | 80,526 |
| 3 | Extension of permanent affiliation (EPA) (ಶಾಶ್ವತ ಸಂಯೋಜನೆ ವಿಸ್ತರಣೆ - ಪ್ರತಿ ೦೫ ವರ್ಷ) | 32,158/- | 90,526 | 38,210 | 25,132 | 90,526 | 95,526 | 25,486 | 25,131 | 25,131 |
| 4 | Fresh permanent affiliation (FPA) (ಹೊಸ ಶಾಶ್ವತ ಸಂಯೋಜನೆ) | 64,158/- | 1,50,526 | 70,210 | 1,60,132 | 1,80,526 | 160,526 | 38,486 | 30,131 | 25,131 |
| 5 | Renewal of permanent of affiliation (RPA) (ಶಾಶ್ವತ ಸಂಯೋಜನೆ ನವೀಕರಣ ಪ್ರತಿ ೦೫ ವರ್ಷಕ್ಕೆ) | 32,158/- | 90,526 | 38,210 | 25,132 | 90,526 | 95,526 | 25,486 | 25,131 | 25,131 |
| 6 | Intake Sought (IS) (ಪ್ರವೇಶ ಮಿತಿಯ ಬೇಡಿಕೆ ಹೊಸ ಸಂಯೋಜನೆಗೆ ಮಾತ್ರ) | 1,28,841/- | 1,61,051 | 96,631 | 80,526 | 1,61,051 | 1,61,051 | 80,526 | 80,526 | 80,526 |
| 7 | Increase in Intake (II) (ಪ್ರವೇಶ ಮಿತಿಯ ಹೆಚ್ಚಳ ಚಾಲ್ತಿಯಲ್ಲಿರುವ ಪದವಿಗೆ ಮಾತ್ರ) | ಪ್ರತಿ ವಿದ್ಯಾರ್ಥಿಗೆ ರೂ.3,000/- | ಪ್ರತಿ ವಿದ್ಯಾರ್ಥಿಗೆ ರೂ.4,500/- | ಪ್ರತಿ ವಿದ್ಯಾರ್ಥಿಗೆ ರೂ.5,000/- | ಪ್ರತಿ ವಿದ್ಯಾರ್ಥಿಗೆ ರೂ.1,00,000/- | ಪ್ರತಿ ವಿದ್ಯಾರ್ಥಿಗೆ ರೂ.1,00,,000/- | ಅನ್ವಯಿಸು-ವುದಿಲ್ಲ (ರೂ.1,00,000) | ಅನ್ವಯಿಸು-ವುದಿಲ್ಲ (ರೂ.1,00,000) | ಪ್ರತಿ ವಿದ್ಯಾರ್ಥಿಗೆ ರೂ.3,000/- | ಪ್ರತಿ ವಿದ್ಯಾರ್ಥಿಗೆ ರೂ.3,000/- |
| 8 | Extension of temporary affiliation(ETA) (ತಾತ್ಕಾಲಿಕ ಸಂಯೋಜನೆ ವಿಸ್ತರಣೆ ಹೊಸ ಪದವಿ ಪ್ರಾರಂಭದಿಂದ ಮುಂದಿನ 2 ವರ್ಷಗಳಿಗೆ ಮಾತ್ರ) | 24,158 | 80526 | 64,420 | 49,122 | 80,526 | 80,526 | 49,122 | 49,122 | 49,122 |

Director

Registrar

Annexure-3

## KARNATAK UNIVERSITY DHARWAD

### AFFILIATION : ALL UG/PG PROGRAMMES
### Stage : OTHER SERVICE TYPE FEES

| Sl. No. | Other Fees | All Degrees (Rs) |
|---|---|---|
| 1 | Application Fees (ಅರ್ಜಿ ಶುಲ್ಕ) | 2,417 |
| 2 | Change of Name of Institution<br>(ಮಹಾವಿದ್ಯಾಲಯದ ಹೆಸರು ಬದಲಾವಣೆ) | 24,158 |
| 3 | Change of Name of Trust/Society<br>(ಸಂಸ್ಥೆಯ ಹೆಸರು ಬದಲಾವಣೆ) | 96,630 |
| 4 | Closure of College<br>(ಮಹಾವಿದ್ಯಾಲಯ ಮುಚ್ಚುವುದು) | 2,500 |
| 5 | Closure of Course<br>(ಪದವಿ ಮುಚ್ಚುವುದು) | 2,500 |
| 6 | Re-Inspection Fees<br>(ಎರಡನೇ/ಮರು ತನಿಖಾ ಶುಲ್ಕ) | 32,210 |
| 7 | Retention Fees (ಧಾರಣಾ ಶುಲ್ಕ) | 00 |
| 8 | Shifting of College<br>(ಮಹಾವಿದ್ಯಾಲಯದ ಸ್ಥಳ ಬದಲಾವಣೆ) | 40,262 |
| 9 | Transfer or Change of Name of Management<br>(ಸಂಸ್ಥೆ ಬದಲಾವಣೆ/ವರ್ಗಾವಣೆ) | 96,630 |
| 10 | University Development Fees (ವಿಶ್ವವಿದ್ಯಾಲಯ ಅಭಿವೃದ್ಧಿ ಶುಲ್ಕ) | 5,000 |
| 11 | PG College Annual Fees (ಮಹಾವಿದ್ಯಾಲಯದ ವಾರ್ಷಿಕ ಶುಲ್ಕ)<br>a. M.A./M.Sc./MCA/PGDCA/M.P.Ed./MSW/MTTM/MVA/M.Music/ All PG Diploma<br>b. M.Com./MIM/E-Commerce/MBA/MSE/M.Ed.<br>c. All UG Colleges | a. 32,210<br>b. 48,315<br>c. 24,158 |

Director

Registrar

# ಮಾರ್ಗಸೂಚಿಗಳು

**ಸಂಯೋಜನಾ ಮಂಜೂರಾತಿಗಾಗಿ ಸಂಯೋಜನಾ ಅರ್ಜಿ ಸಲ್ಲಿಸಲು ಸಂಬಂಧಿಸಿದ ಶುಲ್ಕಗಳ ಮಾಹಿತಿ:**

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಧಾರವಾಡ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಾರಂಭಿಸುವ ಮಹಾವಿದ್ಯಾಲಯಗಳ ಸಂಘ ಸಂಸ್ಥೆಯವರು ಹೊಸ ಸಂಯೋಜನಾ ಶುಲ್ಕ ಈಗಿರುವ ಮಹಾವಿದ್ಯಾಲಯಗಳ ಮುಂದುವರಿಕೆ ಮತ್ತು ವಿಸ್ತರಣೆ ಸಂಯೋಜನಾ ಶುಲ್ಕ, ಶಾಶ್ವತ ಸಂಯೋಜನಾ ಶುಲ್ಕ ಹಾಗೂ ವಾರ್ಷಿಕ ಶುಲ್ಕಗಳನ್ನು Annexure 1, 2 & 3 ರಲ್ಲಿ ಈ ಮೇಲಿನಂತೆ ನಿಗದಿಪಡಿಸಲಾಗಿದೆ.

**ವಿಶೇಷ ಸೂಚನೆ :**

**ವಾರ್ಷಿಕ ಶುಲ್ಕದ ಹಣವನ್ನು ಕಡ್ಡಾಯವಾಗಿ ಎಲ್ಲ ಮಹಾವಿದ್ಯಾಲಯಗಳು ಪ್ರತಿ ವರ್ಷ ಸಲ್ಲಿಸಬೇಕು.**

1) ಈಗಾಗಲೇ ಕ.ವಿ.ವಿ ನಿಗದಿಪಡಿಸಿದ ಕಲಾ ಮತ್ತು ವಿಜ್ಞಾನ ಪದವಿಯಲ್ಲಿ ಬೋಧಿಸಲಾಗುತ್ತಿರುವ ಐಚ್ಛಿಕ ವಿಷಯಗಳನ್ನು 2020-21ರ ಪೂರ್ವದಲ್ಲಿದ್ದಂತೆ ಹಾಗೂ ಸರ್ಕಾರ ಅನುಮೋದನೆ ನೀಡಿದಂತೆ 03 ವಿಷಯಗಳನ್ನು ಪಟ್ಟಿಮಾಡಿ (03 subject combinations) ಪದವಿವಾರು ಪ್ರವೇಶ ಸಂಖ್ಯೆಯ ಮಾಹಿತಿಯನ್ನು ವಿವರವಾಗಿ ನಮೂದಿಸುವುದು. ಈ ವಿಷಯದಲ್ಲಿ ಯಾವುದೇ ಮಾಹಿತಿಯ ಅಗತ್ಯವಿದ್ದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಿ.ಡಿ.ಸಿ/ಸಂಯೋಜನಾ ವಿಭಾಗವನ್ನು ಸಂಪರ್ಕಿಸುವುದು.

2) ಪ್ರಸ್ತುತ ಮಹಾವಿದ್ಯಾಲಯಗಳಲ್ಲಿ ಎಲ್ಲ ಸ್ನಾತಕೋತ್ತರ/ಬಿ.ಬಿ.ಎ/ಬಿ.ಸಿ.ಎ/ಬಿ.ಕಾಂ(ಸಿ.ಎಸ್) ಪದವಿಯನ್ನು ಪ್ರಾರಂಭಿಸಿರುವ, ಈಗಾಗಲೇ ಮುಂದುವರಿಕೆ/ ವಿಸ್ತರಣಾ ಸಂಯೋಜನೆಯನ್ನು ಪಡೆದಿರುವ ಮಹಾವಿದ್ಯಾಲಯಗಳ ಮುಂದುವರಿಕೆ ಸಂಯೋಜನಾ ಮಂಜುರಾತಿಗಾಗಿ ಹಾಗೂ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಹೆಚ್ಚಿಸಲು ಸರ್ಕಾರದ ಅನುಮತಿ ಅವಶ್ಯವಾಗಿದ್ದು UUCMS ತಂತ್ರಾಂಶದಲ್ಲಿಯೇ ಸಂಯೋಜನೆ ಶುಲ್ಕ ಭರಿಸುವುದು. (ವಿದ್ಯಾರ್ಥಿಗಳ ಪ್ರವೇಶ ಮಿತಿಯು ತನಿಖಾ ಸಮಿತಿಯವರ ಶಿಫಾರಸ್ಸಿಗೆ ಒಳಪಟ್ಟಿದೆ).

1. UUCMS ತಂತ್ರಾಂಶದಲ್ಲಿ ಲಭ್ಯವಿರುವ ಮಾಹಿತಿಯಂತೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಗಾಗಿ ಪ್ರತಿ ವಿಭಾಗ (Section) ಕ್ಕೆ ವಿದ್ಯಾರ್ಥಿಗಳ ಗರಿಷ್ಟ ಸಂಖ್ಯೆಯನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ. ಆದ್ದರಿಂದ, ಸಂಯೋಜನೆಯ ವಿವಿಧ ಹಂತಗಳಿಗೆ ವಿಭಾಗವಾರು ಶುಲ್ಕವನ್ನು ನಿಗದಿಪಡಿಸಲಾಗಿದೆ.

a) **ಪ್ರತಿ ಪದವಿಗಳ ಪ್ರತಿ ವಿಭಾಗ** (Section) ಕ್ಕೆ ಈ ಕೆಳಗಿನಂತೆ ವಿದ್ಯಾರ್ಥಿಗಳ ಗರಿಷ್ಟ ಸಂಖ್ಯೆಯನ್ನು ಶುಲ್ಕವನ್ನು ಭರಿಸುವ ಕಾರಣಕ್ಕಾಗಿ ನಿಗದಿಪಡಿಸಲಾಗಿದೆ.

| Sl.No. | *Degree Programmes | Section wise students strength | | | | | |
|---|---|---|---|---|---|---|---|
| | | Section-1 | Section-2 | Section-3 | Section-4 | Section-5 | Section-6 |
| 1 | **B.A./B.Sc. | 120 | 120 | 120 | 120 | 120 | 120 |
| 2 | B.Com. | 120 | 120 | 120 | 120 | 120 | 120 |
| 3 | BBA/BCA | 60 | 60 | 60 | 60 | 60 | 60 |
| 4 | B.Ed. | 50 | 50 | 00 | 00 | 00 | 00 |
| 5 | Other degrees | 45 | 45 | 45 | 45 | 45 | 45 |

*ಒಂದಕ್ಕಿಂತ ಹೆಚ್ಚು ವಿಭಾಗಗಳನ್ನು ಆಯ್ಕೆ ಮಾಡಲು ಇಚ್ಛಿಸಿದಲ್ಲಿ ಪ್ರತಿ ವಿಭಾಗಕ್ಕೆ ನಿಗದಿಪಡಿಸಿದ ಶುಲ್ಕವನ್ನು UUCMS ತಂತ್ರಾಂಶದಲ್ಲಿ ಭರಿಸುವುದು.

**For B.A./B.Sc. , degrees considering three optional subjects as per SEP.

b) ಪ್ರತಿ **ಸ್ನಾತಕೋತ್ತರ ಪದವಿಗಳಿಗೆ** ಪ್ರತಿ ವಿಭಾಗ (Section) ಕ್ಕೆ ಈ ಕೆಳಗಿನಂತೆ ವಿದ್ಯಾರ್ಥಿಗಳ ಗರಿಷ್ಟ ಸಂಖ್ಯೆಯನ್ನು ಶುಲ್ಕವನ್ನು ಭರಿಸುವ ಕಾರಣಕ್ಕಾಗಿ ನಿಗದಿಪಡಿಸಲಾಗಿದೆ.

| Sl.No. | *Degree Programmes | Section-1 | Section-2 |
|---|---|---|---|
| 1 | **All PG Programmes except MBA/MCA | 60 | 00 |
| 2 | MBA/MCA | 60 | 60 |
| 3 | M.Ed. | 50 | 50 |
| 4 | PG Diplomas | 30 | 00 |
| 5 | Certificate | 30 | 30 |

*ಒಂದಕ್ಕಿಂತ ಹೆಚ್ಚು ವಿಭಾಗಗಳನ್ನು ಆಯ್ಕೆ ಮಾಡಲು ಇಚ್ಛಿಸಿದಲ್ಲಿ ಪ್ರತಿ ವಿಭಾಗಕ್ಕೆ ನಿಗದಿಪಡಿಸಿದ ಶುಲ್ಕವನ್ನು UUCMS ತಂತ್ರಾಂಶದಲ್ಲಿ ಭರಿಸುವುದು.

**The maximum intake of the general PG Programmes except MBA/MCA shall have maximum 60 only. No further sections are allowed as it will increase the limit of maximum intake capacity of PG Programmes in the Karnatak University Campus.

c) ಸಂಬಂಧಪಟ್ಟ ಮಹಾವಿದ್ಯಾಲಯಗಳು 2023-24ನೇ ಸಾಲಿನಲ್ಲಿ ಈಗಾಗಲೇ ಅನುಮೋದನೆಗೊಂಡ ಪ್ರವೇಶ ಮಿತಿಯನ್ನು ಮಾತ್ರ ನಮೂದಿಸುವುದು. ಆದಾಗ್ಯೂ ಪ್ರತಿ ವಿಭಾಗದಲ್ಲಿ ಗರಿಷ್ಠ ಮಿತಿಗೆ ಶುಲ್ಕವನ್ನು ನಿಗದಿಪಡಿಸಲಾಗಿದೆ.

d) ಮಹಾವಿದ್ಯಾಲಯಗಳು ಹೆಚ್ಚುವರಿ ಪ್ರವೇಶ ಮಿತಿಯನ್ನು ಬಯಸಿದಲ್ಲಿ UUCMS ತಂತ್ರಾಂಶದಲ್ಲಿ ಅವಕಾಶವಿರುವಂತಹ Intake Increase ಪೋರ್ಟಲ್‌ನ್ನು ಆಯ್ಕೆ ಮಾಡಿ ಹೆಚ್ಚುವರಿ Seat ನ್ನು ನಮೂದಿಸಿ ಶುಲ್ಕವನ್ನು ಭರಿಸತಕ್ಕದ್ದು.

2. **ಹೊಸ ಸಂಯೋಜನೆಗೆ ಅರ್ಜಿ ಸಲ್ಲಿಸುವ ಕುರಿತು.**

ಹೊಸ ಸಂಯೋಜನೆಗಾಗಿ (ಪ್ರಿ-ಕ್ವಾಲಿಫಿಕೇಶನ್/ಸ್ನಾತಕೋತ್ತರ ಹೊರತುಪಡಿಸಿ) UUCMS ತಂತ್ರಾಂಶದಲ್ಲಿ ಸೂಚಿಸಿದ ಶುಲ್ಕದೊಂದಿಗೆ ಎಲ್ಲ ಮಾಹಿತಿ ನಮೂದಿಸಿ ಅದರ ಮೂರು ಪ್ರತಿಗಳನ್ನು ಸಂಯೋಜನಾ ವಿಭಾಗಕ್ಕೆ ಹಾಜರಪಡಿಸುವುದು.

**ಟಿಪ್ಪಣಿ :**

i) ಪ್ರಸ್ತುತ ವರ್ಷ ಪ್ರಾರಂಭಿಸಬೇಕೆಂದಿದ್ದ ಮಹಾವಿದ್ಯಾಲಯವನ್ನು ಮುಂದಿನ ವರ್ಷ ಪ್ರಾರಂಭಿಸಬೇಕೆಂದು ಸ್ಥಾನಿಕ ತನಿಖಾ ಸಮಿತಿಯ ಶಿಫಾರಸ್ಸು ಮಾಡಿದಲ್ಲಿ ಅಥವಾ ಸಂಬಂಧಪಟ್ಟ ಸಂಸ್ಥೆಯವರೇ ಮುಂದಿನ ವರ್ಷ ಪ್ರಾರಂಭಿಸುವುದಾಗಿ ಕೇಳಿಕೊಂಡಲ್ಲಿ ಸಂಬಂಧಪಟ್ಟ ಸಂಸ್ಥೆಯವರು/ಮಹಾವಿದ್ಯಾಲಯದವರು ಆ ಕುರಿತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಪದವಿಯ ಮುಂದುವರಿಕೆ ಶುಲ್ಕವನ್ನು ಭರಿಸಬೇಕಾಗುವುದು.

3. **Renewal of Temporary Affiliation (RTA)** (ಸಂಯೋಜನೆ ಮುಂದುವರಿಕೆ ಕಡ್ಡಾಯ)ಗಾಗಿ ಅರ್ಜಿ ಸಲ್ಲಿಸುವ ಕುರಿತು.

ಮಹಾವಿದ್ಯಾಲಯಗಳ ಸಂಯೋಜನೆ ಮುಂದುವರಿಕೆಗಾಗಿ UUCMS ತಂತ್ರಾಂಶದಲ್ಲಿ ನಿಗದಿತ ಅರ್ಜಿಯನ್ನು ತುಂಬಿ, ಮೂರು ಪ್ರತಿಗಳನ್ನು Annexure 1, 2 & 3 ರಲ್ಲಿ ಕಾಣಿಸಿದಂತೆ ಶುಲ್ಕವನ್ನು UUCMS ತಂತ್ರಾಂಶದಲ್ಲಿ ಭರಿಸಿ ಅಧಿಸೂಚನೆಯಲ್ಲಿ ತಿಳಿಸಿದ ದಿನಾಂಕದೊಳಗಾಗಿ ಕಚೇರಿಗೆ ತಲುಪುವಂತೆ ಸಲ್ಲಿಸುವುದು.

**ಟಿಪ್ಪಣಿ :**

I. ಯಾವುದೇ ಪ್ರಸ್ತುತ ಕೋರ್ಸಿನ ಜೊತೆಗೆ ಹೊಸ ವಿಷಯ ಪ್ರಾರಂಭಿಸಲು ವಿಸ್ತರಣಾ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದಲ್ಲಿ ಹೊಸ ವಿಷಯದ ಬಗೆಗಿನ ಶುಲ್ಕದೊಂದಿಗೆ ವಿಸ್ತರಣಾ ಶುಲ್ಕವನ್ನು ಭರಿಸಬೇಕಾಗುವುದು.

II. ಸಂಯೋಜನಾ ಅರ್ಜಿಯಲ್ಲಿ ವಿಶ್ವವಿದ್ಯಾಲಯವು ನಿಗದಿಪಡಿಸಿದ ವಿಷಯಗಳ ಸರಿಯಾದ ಮಾಹಿತಿ ಒದಗಿಸುವುದು. AECC ಹಾಗೂ DSCCಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.

III. ಸಂಯೋಜನಾ ಅರ್ಜಿಯೊಂದಿಗೆ ಹಿಂದಿನ ವರ್ಷ ಪಡೆದುಕೊಳ್ಳಲಾದ ಸಂಯೋಜನಾ ಅಧಿಸೂಚನೆಯ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು.

IV. ವಿದ್ಯಾರ್ಥಿಗಳ ಪ್ರಮಾಣದಲ್ಲಿ ಹೆಚ್ಚಳ ಬಯಸಿ ಅರ್ಜಿ ಸಲ್ಲಿಸುವವರು UUCMS ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸುವುದು ಮತ್ತು ವಿದ್ಯಾರ್ಥಿ ಪ್ರಮಾಣ ಮಿತಿ ಹೆಚ್ಚಳ ಶುಲ್ಕವನ್ನು Annexure 1, 2 & 3 ರಲ್ಲಿ ತಿಳಿಸಿದಂತೆ UUCMS ತಂತ್ರಾಂಶದಲ್ಲಿ ಕಡ್ಡಾಯವಾಗಿ ಭರಿಸುವುದು (ಪ್ರತಿ ಪದವಿಗೆ ಪ್ರತ್ಯೇಕವಾಗಿ ಶುಲ್ಕ ಭರಿಸುವುದು.)

4. **Extension of Temporary Affiliation (ETA)(ತಾತ್ಕಾಲಿಕ ಸಂಯೋಜನೆ ವಿಸ್ತರಣೆ ಹೊಸ ಪದವಿ** ಪ್ರಾರಂಭದಿಂದ ಮುಂದಿನ 2 ವರ್ಷಗಳಿಗೆ ಮಾತ್ರ) ಗಾಗಿ ಅರ್ಜಿ ಸಲ್ಲಿಸುವ ಕುರಿತು.

ಕಳೆದೆರಡು ಸಾಲಿನಿಂದ ಪ್ರಾರಂಭಗೊಂಡ ಹೊಸ ಪದವಿ ಹಾಗೂ ಹೊಸ ವಿಷಯಗಳ ಸಂಯೋಜನೆಯನ್ನು ಪ್ರಾರಂಭದಿಂದ ವಿಸ್ತರಣಾ ಸಂಯೋಜನೆ ಎಂದು ಪರಿಗಣಿಸಲಾಗುವುದು. ವಿಸ್ತರಣಾ ಸಂಯೋಜನೆಯನ್ನು ಹೊಸ ಪದವಿ/ವಿಷಯಗಳ ಅಂತಿಮ ವರ್ಷದವರೆಗೆ ಮಾತ್ರ ಎಂದು ಪರಿಗಣಿಸಲಾಗುವುದು. ತದನಂತರ ಮುಂದುವರಿಕೆ ಸಂಯೋಜನೆ ಎಂದು ಪರಿಗಣಿಸಲಾಗುವುದು.

**5. ಹೊಸದಾಗಿ ಶಾಶ್ವತ ಸಂಯೋಜನೆ ಮತ್ತು ಶಾಶ್ವತ ಸಂಯೋಜನೆ ಮುಂದುವರಿಕೆ:**

**a) ಹೊಸದಾಗಿ ಶಾಶ್ವತ ಸಂಯೋಜನೆ ಅರ್ಜಿ ಸಲ್ಲಿಸುವ ಕುರಿತು: (Fresh Permanent Affiliation (FPA))**

ಶಾಶ್ವತ ಸಂಯೋಜನೆ ಪಡೆಯಲಿಚ್ಛಿಸುವ ಮಹಾವಿದ್ಯಾಲಯಗಳು/ಸಂಸ್ಥೆಗಳು ವಿಶ್ವವಿದ್ಯಾಲಯದಿಂದ ನಿರಂತರವಾಗಿ ಕಳೆದ 5 (ಐದು) ವರ್ಷಗಳ ಮುಂದುವರಿಕೆ ಸಂಯೋಜನೆಯನ್ನು ಹೊಂದಿರಬೇಕು (ಅರ್ಜಿಯೊಂದಿಗೆ ಅಧಿಸೂಚನೆಗಳ ಪ್ರತಿಗಳನ್ನು ಲಗತ್ತಿಸುವುದು) (ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ (62). ಶಾಶ್ವತ ಸಂಯೋಜನಾ ಅರ್ಜಿಗಳನ್ನು UUCMS ತಂತ್ರಾಂಶದ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಡೌನ್‌ಲೋಡ್ ಮಾಡಿ ಅಗತ್ಯ ದಾಖಲೆಗಳೊಂದಿಗೆ ಅಧಿಸೂಚನೆಯಲ್ಲಿ ತಿಳಿಸಿದ ದಿನಾಂಕದೊಳಗಾಗಿ ಕಚೇರಿಗೆ ತಲುಪುವಂತೆ ಸಲ್ಲಿಸುವುದು.

**b) ಶಾಶ್ವತ ಸಂಯೋಜನೆ ಮುಂದುವರಿಕೆ ಕುರಿತು: Extension of Permanent Affiliation (EPA)/ Renewal of Permanent of Affiliation (RPA)** (ಶಾಶ್ವತ ಸಂಯೋಜನೆ ನವೀಕರಣ ಪ್ರತಿ 05 ವರ್ಷಕ್ಕೆ)

ಅ) ಈಗಾಗಲೇ ಶಾಶ್ವತ ಸಂಯೋಜನೆಯ ನಿಗದಿತ 05 ವರ್ಷದ ಅವಧಿ ಮುಗಿದ ಮಹಾವಿದ್ಯಾಲಯದವರು ಶಾಶ್ವತ ಸಂಯೋಜನೆಯ ನವೀಕರಣದ ತನಿಖೆಗೆ ನಿಗದಿತ ಅವಧಿಯಲ್ಲಿ UUCMS ತಂತ್ರಾಂಶದ ಮುಖಾಂತರ ತನಿಖಾ ಅರ್ಜಿ ಸಲ್ಲಿಸುವುದು.

ಬ) ಶಾಶ್ವತ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳು ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಳಕ್ಕೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ ಸಂಯೋಜನಾ ಅರ್ಜಿ ಮತ್ತು ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಸಂಬಂಧಪಟ್ಟಂತೆ Annexure 1, 2 & 3 ರಲ್ಲಿ ತಿಳಿಸಿದಂತೆ ಶುಲ್ಕವನ್ನು ಭರಿಸಿ UUCMS ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸುವುದು.

**6) ಠೇವಣಿ ಹಣ ಕುರಿತು:**

ಯಾವುದೇ ಸಂಘ/ಸಂಸ್ಥೆಯವರು ಪ್ರಸಕ್ತ ವರ್ಷದಿಂದ ಹೊಸ ಮಹಾವಿದ್ಯಾಲಯವನ್ನು/ಪದವಿ ಪ್ರಾರಂಭಿಸಬೇಕೆಂದು ಇಚ್ಛಿಸಿದಲ್ಲಿ ಸಂಬಂಧಪಟ್ಟ ಸಂಘ/ಸಂಸ್ಥೆಯವರು ವಿಶ್ವವಿದ್ಯಾಲಯದಲ್ಲಿ ಕೆಳಗೆ ತಿಳಿಸಿದ ಠೇವಣಿ ಶುಲ್ಕವನ್ನು ಠೇವಣಿ ಇಡಬೇಕಾಗುವುದು. ಈ ಠೇವಣಿ ಹಣವನ್ನು ಹೊಸ ಮಹಾವಿದ್ಯಾಲಯ ಪ್ರಾರಂಭಿಸುವದಕ್ಕಿಂತ ಮುಂಚಿತವಾಗಿಯೇ ವಿಶ್ವವಿದ್ಯಾಲಯದ ನಿಯಮಾನುಸಾರ ತುಂಬಿ ಸಂಯೋಜನಾ ಅಧಿಸೂಚನೆಯನ್ನು ಪಡೆದುಕೊಂಡು ನಂತರ ಹೊಸ ಪದವಿ/ಮಹಾವಿದ್ಯಾಲಯವನ್ನು ಪ್ರಾರಂಭಿಸಬೇಕಾಗುವುದು.

**ಠೇವಣಿ ಹಣ :**

| | | |
|---|---|---|
| 1) | ಬಿ.ಎ/ಬಿ.ಕಾಂ/ಬಿ.ಎಸ್.ಸಿ/ಬಿ.ಮ್ಯೂಜಿಕ್ ಭಾಗ-1, 2 ಮತ್ತು 3 | ರೂ 9,66,306/- ಮೂರು ಕಂತುಗಳಲ್ಲಿ |
| 2) | ಬಿ.ಎಡ್.(ಹೊಸದಾಗಿ 02 ವರ್ಷದ ಬಿ.ಎಡ್. ಪ್ರಾರಂಭಿಸಲು ಅನುಮತಿ ಇರುವುದಿಲ್ಲ). | ರೂ. 8,05,255/- ಎರಡು ಕಂತುಗಳಲ್ಲಿ |
| 3) | ದೈಹಿಕ ಶಿಕ್ಷಣ ಪದವಿ | ರೂ. 6,44,204/- ಎರಡು ಕಂತುಗಳಲ್ಲಿ |
| 4) | ಸರ್ಟಿಫಿಕೇಟ ಕೋರ್ಸ ಇನ್ ಯೋಗಾ | ರೂ. 1,61,051/- ಒಂದು ಕಂತಿನಲ್ಲಿ |
| 5) | ಬಿ.ವ್ಹಿ.ಎ. ಪದವಿ | ರೂ. 7,24,729/- ಮೂರು ಕಂತುಗಳಲ್ಲಿ |
| 6) | ಬಿ.ಎಸ್.ಡಬ್ಲ್ಯೂ ಪದವಿ | ರೂ. 7,24,729/- ಮೂರು ಕಂತುಗಳಲ್ಲಿ |
| 7) | ಬಿ.ಬಿ.ಎ/ಬಿ.ಸಿ.ಎ/ಬಿ.ಕಾಂ (ಸಿ.ಎಸ್) | ರೂ. 7,24,729/- ಮೂರು ಕಂತುಗಳಲ್ಲಿ |
| 8) | ಬಿ.ಎ.ಎಸ್.ಎಲ್.ಪಿ (RCI ನಿಯಮಾವಳಿಗಳನ್ನು ಅನುಸರಿಸುವುದು) | ರೂ. 11,82,993/- ನಾಲ್ಕು ಕಂತುಗಳಲ್ಲಿ |

* ಸದರಿ ಶುಲ್ಕಕ್ಕೆ ಸೇವಾಶುಲ್ಕ ವಿಧಿಸುವ ವಿಷಯವು ಸರ್ಕಾರದ ಹಂತದಲ್ಲಿ ಚರ್ಚೆಗೆ ಒಳಪಟ್ಟಿರುವುದರಿಂದ ಮುಂದಿನ ದಿನಗಳಲ್ಲಿ ಸರ್ಕಾರವು ಸೇವಾಶುಲ್ಕ ವಿಧಿಸಿದಲ್ಲಿ ಸಂಬಂಧಪಟ್ಟ ಮಹಾವಿದ್ಯಾಲಯಗಳು ತಪ್ಪದೇ ವಿಶ್ವವಿದ್ಯಾಲಯಕ್ಕೆ ಭರಿಸುವ ಕರಾರಿಗೊಳಪಟ್ಟಿರುತ್ತದೆ.

**ವಿಶೇಷ ಸೂಚನೆ:**

ಒಂದು ವೇಳೆ ಸಂಸ್ಥೆಯವರು ಸ್ವಯಂ ಇಚ್ಛೆಯಿಂದ ಮಹಾವಿದ್ಯಾಲಯವನ್ನು ಮುಚ್ಚಿದರೆ KSU Act 2000 ಉಪಪ್ರಕರಣ 65 ರ ಪ್ರಕಾರ ವಿಶ್ವವಿದ್ಯಾಲಯವು ಕ್ರಮ ಕೈಕೊಂಡ ಮಹಾವಿದ್ಯಾಲಯದ ಠೇವಣಿ ನಿಗದಿ ಪಡಿಸಿದ ಹಣದಲ್ಲಿ ಶೇಕಡಾ 10% ರಷ್ಟನ್ನು ಮುರಿದುಕೊಂಡು ಉಳಿದ ಹಣ ಸ್ವಯಂ ಮುಚ್ಚುವ ಕುರಿತು ಅಧಿಸೂಚನೆ ಹೊರಡಿಸಿದ ನಂತರ ಮರಳಿ ಕೊಡಲಾಗುವುದು.

6) **ವಾರ್ಷಿಕ ಶುಲ್ಕ (ಪದವಿ/ವೃತ್ತಿಪರ ಪದವಿಗಳಿಗೆ)**

ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದ ಎಲ್ಲ ಮಹಾವಿದ್ಯಾಲಯಗಳು (ಶಾಶ್ವತ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳು ಹಾಗೂ ಹೊಸ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳು ಸಹಿತ) ಪ್ರತಿ ವರ್ಷ ವಿಶ್ವವಿದ್ಯಾಲಯಕ್ಕೆ ಕೆಳಗೆ ತಿಳಿಸಿದ ವಾರ್ಷಿಕ ಶುಲ್ಕಗಳನ್ನು ಪಾವತಿಮಾಡುವುದು ಕಡ್ಡಾಯವಾಗಿರುತ್ತದೆ. ಬಿ.ಬಿ.ಎ/ಬಿ.ಸಿ.ಎ ಮತ್ತು ಬಿ.ಕಾಂ. (ಸಿ.ಎಸ್) ಪದವಿ ಪ್ರಸಕ್ತ ಮಹಾವಿದ್ಯಾಲಯದಲ್ಲಿ ಪ್ರಾರಂಭಿಸಿದ್ದರೂ ಸಹ ಈ ಪದವಿಗೆ ಪ್ರತ್ಯೇಕ ವಾರ್ಷಿಕ ಶುಲ್ಕ ಭರಿಸುವುದು.

**ವಾರ್ಷಿಕ ಶುಲ್ಕ :** **ರೂ. 24,158/-**

7) **ಶುಲ್ಕದ ಹಣ ಹಿಂತಿರುಗಿಸುವ ಕುರಿತು:**

ನಿಗದಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿಗಳನ್ನು UUCMS ತಂತ್ರಾಂಶದ ಮುಖಾಂತರ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಂತರ ಮತ್ತು ವಿಶ್ವವಿದ್ಯಾಲಯದ ತನಿಖಾ ಸಮಿತಿ ರಚನೆಯಾಗುವ ಪೂರ್ವದಲ್ಲಿ (ಒಂದು ತಿಂಗಳ ಮುಂಚಿತ) ಸಂಯೋಜನಾ ಶುಲ್ಕ ಮರಳ ಪಡೆಯಬಿಚ್ಛಿಸಿದರೆ ಶುಲ್ಕದ ಪ್ರತಿಶತ 75% ರಷ್ಟು ಹಣವನ್ನು ಮಾತ್ರ ಹಿಂತಿರುಗಿಸಲಾಗುವುದು. ಒಂದುವೇಳೆ ತನಿಖಾ ಸಮಿತಿಯು ಕಾರ್ಯ ಪ್ರವೃತ್ತವಾದ ನಂತರ ಶುಲ್ಕದ ಹಣ ಮರಳ ನೀಡಲಾಗುವುದಿಲ್ಲ. ಒಂದು ಸಲ ಪಾವತಿ ಮಾಡಿದ ಹಣವನ್ನು ಮುಂದಿನ ವರ್ಷಕ್ಕೆ ವರ್ಗಾಯಿಸಲು ಬರುವುದಿಲ್ಲ.

8) **ಸರ್ಕಾರಿ ಮಹಾವಿದ್ಯಾಲಯಗಳಿಗೆ ಶುಲ್ಕ ವಿನಾಯಿತಿ ಕುರಿತು:**

ಸರ್ಕಾರಿ ಆದೇಶ ನಂ. ಇಡಿ/240/ಯು.ಆರ್.ಸಿ/2000 ದಿನಾಂಕ : 14-12-2004 ರ ಮೇರೆಗೆ ಸರ್ಕಾರಿ ಮಹಾವಿದ್ಯಾಲಯಗಳ ಸಂಯೋಜನೆಗೆ ಸರ್ಕಾರಿ ಮಹಾವಿದ್ಯಾಲಯಗಳಲ್ಲಿನ ನೂತನ ಪದವಿಗಳಿಗೆ/ ವಿಷಯಕ್ಕೆ/ಭಾಷೆಗೆ/ವಿಧ್ಯಾರ್ಥಿ ಪ್ರಮಾಣದ ಹೆಚ್ಚಳ ಹಾಗೂ ಮುಂದುವರಿಕೆ/ವಿಸ್ತರಣೆ ಮತ್ತು ಶಾಶ್ವತ ಸಂಯೋಜನೆಗೆ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕಾದ ಅರ್ಜಿ ಶುಲ್ಕ ಹಾಗೂ ಸಂಯೋಜನಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದಲ್ಲಿ ದಂಡದ ಶುಲ್ಕ ಆಕರಿಸಲಾಗವುದು.

9) **ಶಿಕ್ಷಣ/ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು ನಿಯಮಗಳನ್ನು ಉಲ್ಲಂಘಿಸದಿರುವ ಕುರಿತು:**

ಶಿಕ್ಷಣ/ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ, ಒಂದು ವೇಳೆ NCTE New Delhi ಯಿಂದ ಮಾನ್ಯತೆ ಹಿಂತೆಗೆದುಕೊಂಡಲ್ಲಿ ಸದರಿ ಮಹಾವಿದ್ಯಾಲಯಗಳು ಯಾವುದೇ ಶೈಕ್ಷಣಿಕ ಮುಂತಾದ ಚಟುವಟಿಕೆಗಳನ್ನು ಮಾಡುವಂತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

**ವಿಶೇಷ ಸೂಚನೆ**

UUCMS ತಂತ್ರಾಂಶದ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಡೌನ್‌ಲೋಡ್ ಮಾಡಿ ಸರಿಯಾದ ಮಾಹಿತಿ ಹಾಗೂ ದಾಖಲೆ ಪತ್ರಗಳೊಂದಿಗೆ **03 ಪ್ರತಿಗಳನ್ನು ಬೈಂಡಿಂಗ್ ಮಾಡಿಸಿ ಸಲ್ಲಿಸುವುದು. ನಿಗದಿತ ಅರ್ಜಿ ಹಾಗೂ ಶುಲ್ಕ ತುಂಬದೇ ಇರುವ, ಸರಿಯಾಗಿ ಮಾಹಿತಿ ಒದಗಿಸದೆ ಇರುವ ಅರ್ಜಿಯನ್ನು ತಿರಸ್ಕೃರಿಸಲಾಗುವುದು. (ಬೈಂಡಿಂಗ್ ಮಾಡಿದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು)**

10) **ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಪ್ರಾರಂಭಿಸುವ ಸ್ನಾತಕೋತ್ತರ ಪದವಿಗಳು:**

**10.1 ಸಂಯೋಜನಾ ಶುಲ್ಕಗಳ ಮಾಹಿತಿ (ಪಿ.ಜಿ. ಪದವಿಗಳು)**

ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಲು ಕ.ವಿ.ವಿ ಯಲ್ಲಿ ಶಾಶ್ವತ ಸಂಯೋಜನೆ ಹೊಂದಿರುವ ಅಥವಾ ಐದು ವರ್ಷಗಳ ಸತತ ಮುಂದುವರಿಕೆ ಸಂಯೋಜನೆ ಹೊಂದಿದ ಮಹಾವಿದ್ಯಾಲಯದವರು ಅರ್ಹರಿರುತ್ತವೆ. ಸದರ ಷರತ್ತನ್ನು ಸ್ನಾತಕೋತ್ತರ ಪದವಿಗಳಾದ ಎಂ.ಬಿ.ಎ, ಎಂ.ಸಿ.ಎ, ಎಂ.ಪಿ.ಎಡ್, ಎಂ.ಎಡ್ ಪದವಿಗಳ ಅಂದರೆ ಸ್ಟ್ಯಾಚೂಟರಿ ಸಂಸ್ಥೆಗಳಾದ AICTE ಹಾಗೂ NCTE ಯಿಂದ ಮಾನ್ಯತೆ ಪಡೆಯುವ ಪದವಿಗಳಿಗೆ ಅನ್ವಯಿಸುವದಿಲ್ಲ.

**10.2 ಹೊಸ ಸಂಯೋಜನೆ (ಸ್ನಾತಕೋತ್ತರ ಪದವಿ):**

ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭಿಸಲು ಪ್ರಿ-ಕ್ವಾಲಿಫಿಕೇಶನ್ ಅರ್ಜಿ ಸಲ್ಲಿಸಬೇಕಾಗುವದು. ಸದರ ಅರ್ಜಿ ನಮೂನೆಗಳನ್ನು ಕ.ವಿ.ವಿ ವೆಬ್‌ಸೈಟ/ ಸಿಡಿಸಿ ವೆಬ್‌ಸೈಟ ದಿಂದ ಪಡೆದು ಅದಕ್ಕೆ ಸಂಬಂಧಿಸಿದ ಅರ್ಜಿ ಶುಲ್ಕ ರೂ. 4,026/- ಹಾಗೂ ಈ ಕೆಳಗೆ ಕಾಣಿಸಿದಂತೆ ಸಂಬಂಧಪಟ್ಟ ಸ್ನಾತಕೋತ್ತರ ಪದವಿಗಳ ತನಿಖಾ ಶುಲ್ಕವನ್ನು ಆನ್‌ಲೈನ್ ಮೂಲಕ ಭರಿಸುವುದು. ನಂತರ ಭರ್ತಿ ಮಾಡಿದ ಪ್ರಿ-ಕ್ವಾಲಿಫಿಕೇಶನ್ ಅರ್ಜಿಯ 03 ಪ್ರತಿಗಳನ್ನು ಸಂಬಂಧಿತ ದಾಖಲಾತಿಗಳೊಂದಿಗೆ ಹಾಗೂ ಶುಲ್ಕ ಭರಿಸಿದ ರಶೀದಿಯನ್ನು ಲಗತ್ತಿಸಿ ನಿಗದಿತ ದಿನಾಂಕದೊಳಗೆ ಕಚೇರಿಗೆ ಸಲ್ಲಿಸುವುದು. ಅರ್ಜಿಯಲ್ಲಿ ತಿಳಿಸಿದ ಸ್ನಾತಕೋತ್ತರ ವಿಷಯ (ವಿಭಾಗ ಪ್ರಾರಂಭಿಸಲು) ಇರುವ ಸೌಲಭ್ಯಗಳ ಬಗ್ಗೆ ತನಿಖೆ ಮಾಡಲು ಪ್ರಿ-ಕ್ವಾಲಿಫಿಕೇಶನ್ ತನಿಖಾ ಸಮಿತಿ ಕಳಿಸಲಾಗುವದು. ಈ ಸಮಿತಿಯು

ಸದರ ಪದವಿ ಪ್ರಾರಂಭಿಸಲು ಶಿಫಾರಸ್ಸು ಮಾಡಿದಲ್ಲಿ ಮಾತ್ರ ರೆಗ್ಯೂಲರ್ ಸಂಯೋಜನೆ ಅರ್ಜಿ ಸಲ್ಲಿಸಲು ತಿಳಿಸಲಾಗುವದು.

10.3 ಪ್ರಿ-ಕ್ವಾಲಿಫಿಕೇಶನ್/ ಹೊಸ ಸಂಯೋಜನಾ ಶುಲ್ಕ :

| ಸ್ನಾತಕೋತ್ತರ ಪದವಿಗಳ ವಿವರ | ಪ್ರಿ-ಕ್ವಾಲಿಫಿಕೇಶನ್ ತನಿಖಾ ಶುಲ್ಕ | ಹೊಸ ಸಂಯೋಜನೆ ಶುಲ್ಕ ಪ್ರಿ-ಕ್ವಾಲಿಫಿಕೇಶನದಲ್ಲಿ ಶಿಫಾರಸ್ಸು ಮಾಡಿದರೆ ಮಾತ್ರ |
|---|---|---|
| ಎಂ.ಎ | ರೂ. 64,420/- | ರೂ. 1,28,841/- |
| ಎಂ. ಕಾಂ./ಎಂ.ಆಯ್.ಎಂ./ಇ-ಕಾಮರ್ಸ | ರೂ. 80,526/- | ರೂ. 1,61,051/- |
| ಎಂ.ಎಸ್ಸಿ | ರೂ. 64,420/- | ರೂ. 96,631/- |
| ಎಂ.ಸಿ.ಎ/ಪಿಜಿಡಿಸಿಎ | ರೂ. 60,899/- | ರೂ. 80,526/- |
| ಎಂ.ಬಿ.ಎ/ಎಂ.ಎಸ್.ಇ/ಪಿ.ಜಿ.ಡಿ.ಬಿ.ಎಂ/ | ರೂ. 80,526/- | ರೂ. 1,61,051/- |
| ಎಂ.ಎಡ್ | ರೂ. 80,526/- | ರೂ. 1,61,051/- |
| ಎಂ.ಪಿ.ಎಡ್ | ರೂ. 60,899/- | ರೂ. 80,526/- |
| ಎಂ.ಎಸ್.ಡಬ್ಲ್ಯೂ/ಎಂ.ಟಿ.ಟಿ.ಎಂ./ಎಂ.ವ್ಹಿ.ಎ./ಎಂ.ಮ್ಯೂಜಿಕ್ | ರೂ. 60,899/- | ರೂ. 80,526/- |
| P. G Diploma in Yoga studies | ರೂ. 55,636/- | ರೂ. 80,526/- |
| ಎರಡು ವರ್ಷದ ಮಾಸ್ಟರ ಆಫ್ ಫೈನಾನ್ಸಿಯಲ್ ಮ್ಯಾನೇಜಮೆಂಟ ಸೆಮಿಸ್ಟರ್ ಪದವಿಯ ಸಿ.ಬಿ.ಸಿ.ಎಸ್ ಅಡಿಯಲ್ಲಿ | ರೂ. 55,636/- | ರೂ. 80,526/- |
| ಒಂದು ವರ್ಷದ ಮಾಸ್ ಕಮ್ಯುನಿಕೇಶನ್ & ಜರ್ನಲಿಸಂ (ಪಿ.ಜಿ.ಡಿ.ಎಂ.ಸಿ.ಜೆ) ಸ್ನಾತಕೋತ್ತರ ಪದವಿ (ಎರಡು ಸೆಮಿಸ್ಟರ್) | ರೂ. 55,636/- | ರೂ. 80,526/- |
| ಪಿ.ಜಿ ಡಿಪ್ಲೊಮಾ ಇನ್ ಬಯೋ-ಸ್ಟ್ಯಾಟಿಸ್ಟಿಕ್ಸ | ರೂ. 55,636/- | ರೂ. 80,526/- |

ಪ್ರಿ-ಕ್ವಾಲಿಫಿಕೇಶನ್‌ನಲ್ಲಿ ಅನುಮೋದನೆಗೊಂಡ ನಂತರ ಮಾತ್ರ ತಮಗೆ ಸಿ.ಡಿ.ಸಿ.ಯಿಂದ ನೀಡಿದ Login Credentialಗಳನ್ನು ಉಪಯೋಗಿಸಿ UUCMS ತಂತ್ರಾಂಶದಲ್ಲಿ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. (ಸ್ನಾತಕೋತ್ತರ ವಿಷಯವನ್ನು ಒಂದು ವಿಭಾಗ ಎಂದು ತಿಳಿಯುವದು) ಉದಾ: ಎಂ.ಎ(ಕನ್ನಡ) ವಿಷಯವನ್ನು ಎಂ.ಎ.(ಕನ್ನಡ) ವಿಭಾಗವೆಂದು ತಿಳಿಯಬೇಕು).

**10.4 ಮುಂದುವರಿಕೆ / ವಿಸ್ತರಣೆಗಾಗಿ ಅರ್ಜಿ ಸಲ್ಲಿಸುವ ಕುರಿತು:**

ಸ್ನಾತಕೋತ್ತರ ಪದವಿ ವಿಭಾಗಕ್ಕೆ ಸಂಯೋಜನೆ ಪಡೆದು ಪ್ರಾರಂಭಿಸಿದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಸದರ ಸ್ನಾತಕೋತ್ತರ ಪದವಿಯನ್ನು ಮುಂದುವರೆಸಲು ಮತ್ತು ಎರಡನೇಯ ವರ್ಷಕ್ಕೆ ವಿಸ್ತರಣೆ ಮಾಡಲು ಪ್ರತ್ಯೇಕವಾಗಿ UUCMS ತಂತ್ರಾಂಶದ ಮುಖಾಂತರ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. ವಿದ್ಯಾರ್ಥಿಗಳ ಪ್ರವೇಶ ಹೆಚ್ಚಿಸಲು ಸರಕಾರದ ಅನುಮತಿ ಅವಶ್ಯವಿದ್ದು ಪ್ರತ್ಯೇಕವಾಗಿ UUCMS ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸುವುದು. ತನಿಖಾ ಸಮಿತಿ ಶಿಫಾರಸ್ಸು ಮಾಡಿದ್ದಲ್ಲಿ ಮಾತ್ರ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗುವುದು.

**10.5 ಸ್ನಾತಕೋತ್ತರ ಪದವಿಗಳ ಠೇವಣಿ ಹಣ:**

ಸ್ನಾತಕೋತ್ತರ ಪದವಿ/ವಿಷಯಗಳನ್ನು ಪ್ರಾರಂಭಿಸಲು ಕರ್ನಾಟಕ ಸರಕಾರ ಶಿಫಾರಸ್ಸು ಮಾಡಿದಲ್ಲಿ ಕೆಳಗೆ ತಿಳಿಸಿದ ಹಣವನ್ನು ಠೇವಣಿ ಹಣ ಎಂದು ಇಡಬೇಕಾಗುವದು. ಈ ಠೇವಣಿ ಹಣವನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಪಾವತಿ ಮಾಡಿದ ನಂತರ ಪದವಿ (ವಿಷಯ) ಪ್ರಾರಂಭಿಸಲು ಅಧಿಸೂಚನೆ ಹೊರಡಿಸಲಾಗುವುದು.

**10.6 ವಾರ್ಷಿಕ ಶುಲ್ಕ :**

ಸ್ನಾತಕೋತ್ತರ ಪದವಿ (ವಿಷಯ) ಗಳಿಗೆ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳಲ್ಲಿ ಪ್ರತಿಯೊಂದು ವಿಷಯಗಳಿಗೆ ತಿಳಿಸಿದ ವಾರ್ಷಿಕ ಶುಲ್ಕವನ್ನು ಪ್ರತಿ ವರ್ಷವೂ SBI Collect ಮುಖಾಂತರ ಭರಿಸಬೇಕು.

1) ಸ್ನಾತಕೋತ್ತರ ಪದವಿ ಪ್ರತಿಯೊಂದು ವಿಷಯಕ್ಕೆ ಇರುವ ವಾರ್ಷಿಕ ಶುಲ್ಕ ಈ ಕೆಳಗಿನಂತೆ.

| ಸ್ನಾತಕೋತ್ತರ ಪದವಿಗಳ ವಿವರ | ವಾರ್ಷಿಕ ಶುಲ್ಕ | ಠೇವಣಿ ಶುಲ್ಕ |
|---|---|---|
| ಎಂ.ಎ | ರೂ. 24,158/- | ರೂ. 9,66,306/- (ಎರಡು ಕಂತುಗಳಲ್ಲಿ) |
| ಎಂ. ಕಾಂ./ಎಂ.ಆಯ್.ಎಂ./ಇ-ಕಾಮರ್ಸ | ರೂ. 80,526/- | ರೂ. 9,66,306/- (ಎರಡು ಕಂತುಗಳಲ್ಲಿ) |
| ಎಂ.ಎಸ್ಸಿ | ರೂ. 32,210/- | ರೂ. 9,66,306/- (ಎರಡು ಕಂತುಗಳಲ್ಲಿ) |
| ಪಿಜಿಡಿಸಿಎ | ರೂ. 20,132/- | ರೂ. 9,66,306/- (ಎರಡು ಕಂತುಗಳಲ್ಲಿ) |
| ಎಂ.ಸಿ.ಎ./ಎಂ.ಬಿ.ಎ/ಎಂ.ಎಸ್.ಇ | ರೂ. 80,526/- | ರೂ. 9,66,306/- (ಎರಡು ಕಂತುಗಳಲ್ಲಿ) |
| ಎಂ.ಎಡ್ | ರೂ. 80,526/- | ರೂ. 9,66,306/- (ಎರಡು ಕಂತುಗಳಲ್ಲಿ) |
| ಎಂ.ಪಿ.ಎಡ್ | ರೂ. 19,486/- | ರೂ. 9,66,306/- (ಎರಡು ಕಂತುಗಳಲ್ಲಿ) |
| ಎಂ.ಎಸ್.ಡಬ್ಲ್ಯೂ/ಎಂ.ಟಿ.ಟಿ.ಎಂ./ಎಂ.ವ್ಹಿ.ಎ. /ಎಂ.ಮ್ಯೂಜಿಕ್ | ರೂ. 20,131/- | ರೂ. 8,05,255/- (ಎರಡು ಕಂತುಗಳಲ್ಲಿ) |
| ಪಿ.ಜಿ.ಡಿ.ಬಿ.ಎಂ | ರೂ. 80,586/- | ರೂ. 6,44,204/- (ಎರಡು ಕಂತುಗಳಲ್ಲಿ) |

ಟಿಪ್ಪಣಿ:

1. ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಪ್ರತಿ ಎರಡು ವರ್ಷಕ್ಕೊಮ್ಮೆ ಶುಲ್ಕದಲ್ಲಿ ಹೆಚ್ಚಳವಾಗುತ್ತದೆ.
2. ಸಂಯೋಜನಾ ಶುಲ್ಕಗಳ ಬಗ್ಗೆ ವೆಬ್‌ಸೈಟ್ **www.kud.ac.in** ಮೂಲಕ ಮಾಹಿತಿ ಪಡೆದುಕೊಳ್ಳಬಹುದು. ವೆಬ್‌ಸೈಟನಲ್ಲಿ ನೀಡಿದ ಅಧಿಸೂಚನೆಯ ಎಲ್ಲ ಮಾಹಿತಿಯು ಶರತ್ತು/ ತಿದ್ದುಪಡಿಗೊಳಪಟ್ಟಿರುತ್ತದೆ.

A. Channappa

**ಕುಲಸಚಿವರು**